Udayavani
ಮಣಿಪಾಲ, ರವಿವಾರ, ಡಿಸೆಂಬರ್ 24, 2017

# ಕೀಟ ಬಾಧೆ : ತೆಂಗು ಕೃಷಿಕರಿಗೆ ಆತಂಕ ಬೇಡ

ಕಾಸರಗೋಡು, ಡಿ.23: ಕರಾವಳಿ ಕಾಸರಗೋಡು ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಕಳೆದ ಕೆಲವು ತಿಂಗಳಿಂದ ತೆಂಗಿನ ಮರಗಳ ಗರಿಗಳಲ್ಲಿ ಕಂಡು ಬಂದಿರುವ ಬಿಳಿಯ ಚುಕ್ಕೆಗಳ ಬಗ್ಗೆ ತೆಂಗು ಕೃಷಿಕರು ಆತಂಕಪಡಬೇಕಾದ ಅಗತ್ಯವಿಲ್ಲವೆಂದು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ (ಸಿಪಿಸಿಆರ್‌ಐ) ನಿರ್ದೇಶಕ ಡಾ|ಪಿ.ಚೌಡಪ್ಪ ಅವರು ಹೇಳಿದ್ದಾರೆ.

**ಬಿಳಿಯ ಚುಕ್ಕೆ:** ತೆಂಗಿನ ಗರಿಗಳಲ್ಲಿ ಮಚ್ಚೆಯಾಕಾರದಲ್ಲಿ ಬಿಳಿಯ ಚುಕ್ಕೆಗಳು ವ್ಯಾಪಕವಾಗಿ ಕಂಡು ಬರುತ್ತಿದ್ದು ಇದರಿಂದಾಗಿ ಕೃಷಿಕರು ಕಂಗಾಲಾಗಿದ್ದರು. ಇದು 'ಅಲೆಯುರೋಡಿಕ್ಸ್ ರೂಂಗಿಯೋಪೆರ್ ಕುಲಾಟಿಸ್ ಮಾರ್ಟಿನ್' ಎಂಬ ಕೀಟದ ಬಾಧೆಯಾಗಿದೆ. ಇದು ತೆಂಗು ಕೃಷಿಗೆ ಹಾನಿಕಾರಕವಲ್ಲವೆಂದು ಅವರು ತಿಳಿಸಿದ್ದಾರೆ. ಕಾಸರಗೋಡು ಪ್ರೆಸ್‌ಕ್ಲಬ್‌ನಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ ಈ ಕೀಟ ಬಾಧೆಯ ನಿವಾರಣೆಗೆ ಯಾವುದೇ ರಾಸಾಯನಿಕವನ್ನು ಸಿಂಪಡಿಸಬಾರದು ಎಂದು ಸಲಹೆ ನೀಡಿದ್ದಾರೆ.

**ದಕ್ಷಿಣ ಕೇರಳದಲ್ಲಿ ಕಂಡು ಬಂದಿತ್ತು**

ಇದಕೂ ಮೊದಲು ದಕ್ಷಿಣ ಕೇರಳದಲಿ ಈ



ಐಯಲ್ಲಿ ಬೃಹತ್ ಕಿಸಾನ್ ಮೇಳವು ಜರಗಲಿದೆ. ಇದರಲ್ಲಿ ವಿವಿಧ ಕೃಷಿಗಳ ಕುರಿತಾಗಿ ವಿಚಾರಗೋಷ್ಠಿ ನಡೆಯಲಿದ್ದು, ಕೃಷಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಿದರು. ಪತ್ರಿಕಾಗೋಷ್ಠಿಯಲ್ಲಿ ಡಾ|ಪಿ.ಮುರಳೀಧರನ್, ಡಾ|ಪಿ.

ತೆಂಗಿನ ಮರದಲ್ಲಿ ಪ್ರಾರಂಭದಲ್ಲಿ ಕಂಡು ಬಂದರೂ ಸ್ವಲ್ಪ ಸಮಯದ ಬಳಿಕ ಇದು ಕಣ್ಮರೆಯಾಗುತ್ತದೆ. ಇದರಿಂದಾಗಿ ತೆಂಗಿನ ಕಾಯಿಯ ಇಳುವರಿಗೆ ಯಾವುದೇ ರೀತಿಯ ತೊಂದರೆಯಾಗದು. ಇದಕ್ಕೆ ಪರಿಹಾರವಾಗಿ ಬೇವಿನ ಎಣ್ಣೆಯನ್ನು ತೆಂಗಿನ ಗರಿಗೆ ಸಿಂಪಡಿಸಬಹುದು.

2016 ರಿಂದ ಬಿಳಿ ಕೀಟ ಹಾವಳಿ ಕೇರಳದಲ್ಲಿ ಕಂಡು ಬರಲಾರಂಭಿಸಿದ್ದು, ನೈಸರ್ಗಿಕವಾಗಿ ಇದರ ನಿಯಂತ್ರಣ ಸಾಧ್ಯವಾಗುತ್ತದೆ. ಕಾಸರಗೋಡು ಸಿಪಿಸಿಆರ್‌ಐಯಲ್ಲಿ ಕಾಣಿಸಿಕೊಂಡಿರುವ ಬಿಳಿ ಕೀಟ ಹಾವಳಿ ಗಣನೀಯವಾಗಿ ಕಡಿಮೆಯಾಗಿದೆ. ತಲಪಾಡಿ, ಉಳ್ಳಾಲ ಸಹಿತ ದ.ಕ. ಜಿಲ್ಲಾ ವ್ಯಾಪ್ತಿಯಲ್ಲಿ ಬಿಳಿ ಕೀಟ ಜತೆಗೆ ಇತರ ರೋಗಬಾಧೆ ತಗಲಿರುವ ಸಾಧ್ಯತೆಯಿದ್ದು, ಈ ಬಗ್ಗೆ ಮಂಗಳೂರು, ಉಡುಪಿಯ ಕೆ.ವಿ.ಕೆ. ಹಾಗೂ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಡಾ|ಪಿ.ಚೌಡಪ್ಪ ಅವರು ಹೇಳಿದ್ದಾರೆ.

ತೆಂಗಿನ ಗರಿ ಅಥವಾ ಬಾಳೆ ಎಲೆಯ ತಳಭಾಗದಲ್ಲಿ 10 ರಿಂದ 20 ರಷ್ಟು ಅಂಡಾಕಾರದ ಮೊಟ್ಟೆಗಳನ್ನಿರಿಸುವ ಈ ಕೀಟ ಇದರ ಸುತ್ತು ಪೊರೆ ರಚಿಸಿಕೊಂಡು ವಂಶಾಭಿವೃದ್ಧಿ ಮಾಡುತ್ತದೆ. ಈ